ಒಳ್ಳೆಯ ರೀತಿಯಲ್ಲಿ ವಿದ್ಯಾರ್ಥಿ ಜೀವನವನ್ನು ಅನುಭವಿಸಬೇಕು. ಕಷ್ಟ ಬಂದಾಗ ಎದೆಗುಂದದೇ ಎದುರಿಸಬೇಕು. ಪದವಿ, ಸ್ನಾತಕೋತ್ತರ ಪದವಿ ಸೇರಿದಂತೆ 5 ವರ್ಷ ಕಷ್ಟಪಟ್ಟರೇ ಜೀವನ ರೂಪಿಸಿಕೊಳ್ಳಬಹುದು. ಆದರೆ, ಎಡವಿದರೇ ಜೀವನದಲ್ಲಿ ತುಂಬಾ ಸಂಕಷ್ಟ ಎದುರಿಸಬೇಕಾಗುತ್ತದೆ.
● ಕೆ.ಹರೀಶ್‌ಗೌಡ ಶಾಸಕ

ಕನ್ನಡಪ್ರಭ
ಶುಕ್ರವಾರ 16.6.2023

ವಿದ್ಯಾಭ್ಯಾಸವನ್ನು ಅರ್ಧಕ್ಕೆ ಯಾರೂ ನಿಲ್ಲಿಸಬೇಡಿ

ವಿದ್ಯಾಭ್ಯಾಸವನ್ನು ಪರಿಪೂರ್ಣಗೊಳಿಸಲು ಶಾಸಕ ಕೆ. ಹರೀಶ್‌ಗೌಡ ಕರೆ | ಜಿಲ್ಲಾ ಮಟ್ಟದ ಯುವ ಉತ್ಸವ ಉದ್ಘಾಟನೆ

● **ಕನ್ನಡಪ್ರಭ ವಾರ್ತೆ** ಮೈಸೂರು

ವಿದ್ಯಾರ್ಥಿನಿಯರು ವಿದ್ಯಾಭ್ಯಾಸವನ್ನು ಯಾವುದೇ ಕಾರಣಕ್ಕೂ ಅರ್ಧಕ್ಕೆ ನಿಲ್ಲಿಸಬೇಡಿ. ಪದವಿ ಜೊತೆಗೆ ಸ್ನಾತಕೋತ್ತರ ಪದವಿ ಮಾಡಿ. ವಿದ್ಯಾಭ್ಯಾಸವನ್ನು ಪರಿಪೂರ್ಣವಾಗಿ ಮುಗಿಸುವಂತೆ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಕರೆ ನೀಡಿದರು.

ನಗರದ ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ಕೇಂದ್ರ ಯುವಕಾರ್ಯ ಹಾಗೂ ಕ್ರೀಡಾ ಸಚಿವಾಲಯದ ನೆಹರು ಯುವ ಕೇಂದ್ರ, ಮೈಸೂರು ವಿವಿ ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಗುರುವಾರ ಆಯೋಜಿಸಿದ್ದ ಜಿಲ್ಲಾ ಮಟ್ಟದ ಯುವ ಉತ್ಸವ- 2023 ಅನ್ನು ಅವರು ಉದ್ಘಾಟಿಸಿ ಮಾತನಾಡಿದರು.

ಈ ವಯಸ್ಸಿನಲ್ಲಿ ಚಂಚಲತೆ ಇರುತ್ತದೆ. ವಿದ್ಯಾರ್ಥಿನಿಯರು ಯಾವುದೇ ಆಸೆ, ಆಮಿಷಗಳಿಗೆ ಮನಸನ್ನು ಹರಿಬಿಡದೇ ವಿದ್ಯಾಭ್ಯಾಸದತ್ತ ಗಮನ ಹರಿಸಬೇಕು. ಒಮ್ಮೆ ಎಡವಿದರೆ ಭವಿಷ್ಯ ಹಾಳಾಗುವ ಜೊತೆಗೆ ಸಮಾಜ ನೋಡುವ ರೀತಿ ಬದಲಿಸುತ್ತದೆ. ಹೀಗಾಗಿ, ಜಾಗೃತಿಯಿಂದ ವಿದ್ಯಾಭ್ಯಾಸ ಮಾಡಿ ಉನ್ನತ ಸ್ಥಾನಕ್ಕೇರುವ ಮೂಲಕ ಸಾವಿರಾರು ಜನಕ್ಕೆ ದಾರಿಯಾಗಬೇಕು ಎಂದರು. ಒಳ್ಳೆಯ ರೀತಿಯಲ್ಲಿ ವಿದ್ಯಾರ್ಥಿ ಜೀವನವನ್ನು ಅನುಭವಿಸಬೇಕು. ಕಷ್ಟ ಬಂದಾಗ ಎದೆಗುಂದದೇ ಎದುರಿಸಬೇಕು. ಪದವಿ, ಸ್ನಾತಕೋತ್ತರ ಪದವಿ ಸೇರಿದಂತೆ 5 ವರ್ಷ ಕಷ್ಟಪಟ್ಟರೇ ಜೀವನ ರೂಪಿಸಿಕೊಳ್ಳಬಹುದು. ಆದರೆ, ಎಡವಿದರೇ ಜೀವನದಲ್ಲಿ ತುಂಬಾ ಸಂಕಷ್ಟ ಎದುರಿಸಬೇಕಾಗುತ್ತದೆ. ಹೀಗಾಗಿ, ವಿದ್ಯಾಭ್ಯಾಸವನ್ನು ಪರಿಪೂರ್ಣಗೊಳಿಸಿಕೊಂಡು ಜೀವನ ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮೈಸೂರಿನ ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ಗುರುವಾರ ನಡೆದ ಜಿಲ್ಲಾ ಮಟ್ಟದ ಯುವ ಉತ್ಸವವನ್ನು ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಿದರು. ಎಂ.ಎನ್. ನಟರಾಜ್, ಡಾ.ಬಿ.ವಿ. ವಸಂತಕುಮಾರ್, ಪ್ರೊ.ಎಂ.ಬಿ. ಸುರೇಶ್, ಡಾ.ಆರ್. ಜಯರಾಜು, ಡಾ. ಸವಿತಾ, ಅಭಿಷೇಕ್ ಎಸ್. ಚವರೆ ಇದ್ದರು.

ಮೈಸೂರಿನ ಮಹಾರಾಜ ಮತ್ತು ಮಹಾರಾಣಿ ಕಾಲೇಜುಗಳು ಪ್ರತಿಷ್ಠಿತ ಕಾಲೇಜುಗಳಾಗಿದ್ದು, ಈ ಕಾಲೇಜುಗಳ ಬಗ್ಗೆ ಹೆಮ್ಮೆ ಇದೆ. ಇಲ್ಲಿ 8 ವಿಷಯಗಳ ಸ್ನಾತಕೋತ್ತರ ತರಗತಿಗಳು ನಡೆಯುತ್ತವೆ. ಹೀಗಾಗಿ, ಸಂಶೋಧನೆಗೂ ಅವಕಾಶ ನೀಡುಬೇಕು ಎಂದು ಪ್ರಾಂಶುಪಾಲರು ಕೇಳಿದ್ದಾರೆ. ಈ ನಿಟ್ಟಿನಲ್ಲಿ ಇದಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದರು.

ನಮ್ಮದು ಯಂಗ್ ಇಂಡಿಯಾ: ನೆಹರು ಯುವ ಕೇಂದ್ರದ ದಕ್ಷಿಣ ರಾಜ್ಯಗಳ ಪ್ರಾದೇಶಿಕ ನಿರ್ದೇಶಕ ಎಂ.ಎನ್.ನಟರಾಜ್ ಮಾತನಾಡಿ, ನಮ್ಮ ದೇಶದಲ್ಲಿ ಇರುವಷ್ಟು ಯುವ ಶಕ್ತಿ ಬೇರೆ ದೇಶಗಳಲ್ಲಿ ಇಲ್ಲ. ಹೀಗಾಗಿಯೇ ಜಗತ್ತಿನ ಎಲ್ಲಾ ದೇಶಗಳು ನಮ್ಮ ರಾಷ್ಟ್ರವನ್ನು ಯಂಗ್ ಇಂಡಿಯಾ ಎಂದು ಕರೆಯುವ ಮೂಲಕ ನಮ್ಮ ದೇಶದತ್ತ ದೃಷ್ಟಿಯಿಟ್ಟಿವೆ ಎಂದರು.

ಸ್ವಾತಂತ್ರ್ಯ ಮುನ್ನ ನಮ್ಮ ದೇಶದ ಒಟ್ಟು ಜನ ಸಂಖ್ಯೆ 33 ಕೋಟಿ ಇತ್ತು. ಈಗ 130 ಕೋಟಿ ದಾಟಿದೆ. ಚೀನಾದ ನಂತರದ ಜನಸಂಖ್ಯೆಯಲ್ಲಿ ನಾವು ಎರಡನೇ ಸ್ಥಾನದಲ್ಲಿ ಇದ್ದೇವೆ. ಮುಂದಿನ ಕೆಲವು ವರ್ಷಗಳಲ್ಲಿ ಅದನ್ನು ಮೀರಿಸಲಿದ್ದೇವೆ. ಸ್ವಾತಂತ್ರ್ಯ ಬಂದ 75 ವರ್ಷಗಳಲ್ಲಿ 100 ಕೋಟಿ ಮಾನವ ಸಂಪನ್ಮೂಲವನ್ನು ಹೊಂದಿದ್ದೇವೆ ಎಂದರು.

ನಮ್ಮ ದೇಶದಲ್ಲಿ 15 ರಿಂದ 29 ವಯಸ್ಸಿನವರು 45 ಕೋಟಿ ಮಂದಿ ಇದ್ದಾರೆ. ಈ ಪ್ರಮಾಣದ ಯುವ ಶಕ್ತಿ, ನಮಗಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಚೀನಾದಲ್ಲೂ ಇಲ್ಲ. ಈ ನಮ್ಮ ದೇಶದ ಯುವಶಕ್ತಿಯನ್ನು ಸಮರ್ಪಕವಾಗಿ ದೇಶ ಕಟ್ಟಲು ಬಳಸಿಕೊಂಡರೆ, ಕೆಲವು ಸಮಸ್ಯೆಗಳನ್ನಾದರೂ ಬಗೆಹರಿಸಬಹುದು ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ.ಬಿ.ವಿ. ವಸಂತಕುಮಾರ್, ಮೈಸೂರು ವಿವಿ ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಪ್ರೊ.ಎಂ.ಬಿ. ಸುರೇಶ್, ಕಾಲೇಜಿನ ಸಾಂಸ್ಕೃತಿಕ ಸಮಿತಿ ಕಾರ್ಯದರ್ಶಿ ಡಾ.ಆರ್. ಜಯರಾಜು, ಖಜಾಂಚಿ ಡಾ. ಸವಿತಾ, ಎನ್‌ಎಸ್‌ಎಸ್ ಕಾರ್ಯಾಕ್ರಮಾಧಿಕಾರಿ ಎಂ.ವಿಶ್ವನಾಥನ್, ಡಾ. ನಿಂಗರಾಜು, ಯುವ ಕೇಂದ್ರದ ಸಲಹಾ ಸಮಿತಿ ಸದಸ್ಯ ಪ್ರಕಾಶ್, ನೆಹರು ಯುವ ಕೇಂದ್ರದ ಜಿಲ್ಲಾ ಯುವ ಅಧಿಕಾರಿ ಅಭಿಷೇಕ್ ಎಸ್. ಚವರೆ ಇತರರು ಇದ್ದರು.

> **ಮಹಾರಾಣಿ ಕಾಲೇಜು ಮತ್ತು ಹಾಸ್ಟೆಲ್ ಕಟ್ಟಡಗಳು ಶಿಥಿಲಗೊಂಡಿವೆ ಎಂಬುದು ಬೇಸರ ಸಂಗತಿ. ಕಾಲೇಜಿನ ಅಭಿವೃದ್ಧಿ ಏನೇನೂ ಅಗತ್ಯವಿದೆ, ಯಾವ ಸೌಕರ್ಯ ಬೇಕಿದೆ ಎಂಬುದರ ಕುರಿತು ಕಾಲೇಜು ಪ್ರಾಂಶುಪಾಲರಿಂದ ಮಾಹಿತಿ ಪಡೆದು ಸರ್ಕಾರದಿಂದ ಅಗತ್ಯ ನೆರವು ಒದಗಿಸುವ ನಿಟ್ಟಿನಲ್ಲಿ ಕೆಲಸ ಮಾಡಲಾಗುವುದು.**
> ● **ಕೆ. ಹರೀಶ್‌ಗೌಡ** ಶಾಸಕರು

ನಾಳೆ ಓಪನ್ ಡೇ ಕಾರ್ಯಕ್ರಮ

ನಂಜನಗೂಡು: ತಾಲೂಕಿನ ತಾಂಡವಪುರದ ಬಳಿಯಿರುವ ಮಹಾರಾಜ ತಾಂತ್ರಿಕ ಮಹಾ ವಿದ್ಯಾಲಯ ಕಾಲೇಜು ಆವರಣದಲ್ಲಿ ಜೂ.17ರಂದು ಪಿಯುಸಿ ವಿದ್ಯಾರ್ಥಿಗಳಿಗೆ ಅನುಕೂಲ ಸಲುವಾಗಿ ಓಪನ್ ಡೇ ಕಾರ್ಯಕ್ರಮ ಏರ್ಪಡಿಸಿ ಇನ್‌ಸೈಟ್ಸ್, ಆನ್ ಸಿಇಟಿ ಕೌನ್ಸಿಲಿಂಗ್ ಕಾರ್ಯಾಗಾರ ಆಯೋಜಿಸಿದ್ದು, ಗ್ರಾಮೀಣ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕಾಲೇಜಿನ ಪ್ರಾಧ್ಯಾಪಕ ಎಂ.ಜಿ.ಶ್ರೀನಿವಾಸ್ ಹೇಳಿದರು. ಗ್ರಾಮೀಣ ವಿದ್ಯಾರ್ಥಿಗಳಿಗೆ ಉತ್ತಮ ತಾಂತ್ರಿಕ ಶಿಕ್ಷಣವನ್ನು ಒದಗಿಸಬೇಕೆಂಬ ಹಂಬಲದೊಂದಿಗೆ 2014ರಲ್ಲಿ ಎಂಐಟಿ ಕಾಲೇಜು ಸ್ಥಾಪನೆಗೊಂಡಿದೆ. ಈ ವರೆಗೆ ಸಾವಿರಾರು ವಿದ್ಯಾರ್ಥಿಗಳು ಸಂಸ್ಥೆಯಿಂದ ಉತ್ತಮ ಗುಣಮಟ್ಟದ ಶಿಕ್ಷಣ ಪಡೆಯುವ ಜೊತೆಗೆ ಉದ್ಯೋಗವಕಾಶವನ್ನು ಪಡೆದಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಮೈಸೂರು ಜಿಲ್ಲೆಯ ಎಲ್ಲ ತಾಲೂಕಿನ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ಮನವಿ ಮಾಡಿದರು. ಹೆಚ್ಚಿನ ಮಾಹಿತಿಗಾಗಿ ಪ್ರೊ. ಸಲಾಮತ್, ಮೊ. 9980832371 ಸಂಪರ್ಕಿಸುವಂತೆ ಅವರು ಕೋರಿದರು. ಮೊಹಮದ್ ಸಲಾಮತ್, ಗಣೇಶ್ ಇದ್ದರು.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಸುವುದೇನೆಂದರೆ, ಮೈಸೂರು ಸಿಟಿ, ನಜರ್‌ಬಾದ್ ಮೊಹಲ್ಲಾ, ಬನ್ನೂರು ಮುಖ್ಯ ರಸ್ತೆ, ಯರಗನಹಳ್ಳಿ ಗ್ರಾಮದ, ಮನೆ ನಂಬರ್: 228ರಲ್ಲಿ ವಾಸವಿರುವ ಲೇಟ್ ಹುಚ್ಚೇಗೌಡರವರ ಮಗನಾದ ಸುಮಾರು 62 ವರ್ಷ ವಯಸ್ಸುಳ್ಳ ಶ್ರೀ. ಬಿ.ಹೆಚ್.ಮಹಾಲಿಂಗಯ್ಯ ಆದ ನಾನು ದಿನಾಂಕ 14-06-2023 ರಂದು ಬೆಳಗ್ಗೆ ಸುಮಾರು 10:00 ಗಂಟೆ ಸಮಯದಲ್ಲಿ ನನ್ನ ಸ್ವತ್ತಿಗೆ ಸಂಬಂದಪಟ್ಟ ದಾಖಲೆಯ ಜೆರಾಕ್ಸ್ ಪ್ರತಿಯನ್ನು ಪಡೆಯಲು ಟೆರಿಷಿಯನ್ ಕಾಲೇಜು ಬಳಿ ಬಂದಂತಹ ಸಂದರ್ಭದಲ್ಲಿ ನಾನು ನನ್ನ ದಿನಾಂಕ 12-11-2010ರ ಶುದ್ಧ ಕ್ರಯಪತ್ರದ ಮೂಲ ಪ್ರತಿಯನ್ನು ಕಳೆದು ಕೊಂಡಿರುತ್ತೇನೆ. ಸದರಿ ಕ್ರಯಪತ್ರವು ಮೈಸೂರು ಉತ್ತರ ಉಪ ನೋಂದಣಾಧಿಕಾರಿಯವರ ಕಛೇರಿಯಲ್ಲಿ ದಸ್ತಾವೇಜು ಸಂಖ್ಯೆ: MYN-1-14016-2010-11 ಆಗಿ ಸಿಡಿ ನಂ.MYND254 ರ ಪ್ರಕಾರ ದಿನಾಂಕ 12-11-2010 ರಂದು ನೋಂದಣಿಯಾಗಿರುತ್ತದೆ. ಸಾರ್ವಜನಿಕರಲ್ಲಿ ಕೇಳಿಕೊಳ್ಳುವುದೇನೆಂದರೆ ಸದರಿ ಕ್ರಯಪತ್ರವು ಯಾರಿಗಾದರು ಸಿಕ್ಕಿದಂತಹ ಸಂದರ್ಭದಲ್ಲಿ ಮೇಲ್ಕಂಡ ವಿಳಾಸದಲ್ಲಿರುವ ನನಗೆ ದಯಮಾಡಿ ಹಿಂತಿರುಗಿಸಬೇಕಾಗಿ ಕೋರಿಕೊಳ್ಳುತ್ತೇನೆ.
ದಿನಾಂಕ: 14-06-2023
ಸ್ಥಳ:ಮೈಸೂರು
ಸಹಿ/- ಬಿ.ಹೆಚ್.ಮಹಾಲಿಂಗಯ್ಯ
ಮೊ: 9972723355

ಚಿರತೆ ದಾಳಿಗೆ ಸಾಕು ಪ್ರಾಣಿಗಳು ಬಲಿ

● **ಕನ್ನಡಪ್ರಭ ವಾರ್ತೆ** ಹುಣಸೂರು

ತಾಲೂಕಿನ ವಿವಿಧೆಡೆ ಕಳೆದೆರಡು ದಿನಗಳಲ್ಲಿ ಚಿರತೆ ದಾಳಿ ನಡೆಸಿ ಸಾಕು ಪ್ರಾಣಿಗಳನ್ನು ತಿಂದು ಹಾಕಿದ್ದು, ರೈತರು ಆತಂಕ ವ್ಯಕ್ತಪಡಿಸಿದ್ದಾರೆ. ತಾಲೂಕಿನಶ್ರವಣಹಳ್ಳಿಯ ಮಹದೇವಮ್ಮ ಅವರ ಮನೆಯ ಕೊಟ್ಟಿಗೆಯಲ್ಲಿ ಕಟ್ಟಿಹಾಕಿದ್ದ 40 ಸಾವಿರ ಬೆಲೆ ಬಾಳುವ ಎರಡು ಮೇಕೆಗಳನ್ನು ಚಿರತೆ ತಿಂದು ಹಾಕಿದೆ. ರಾಮೇನಹಳ್ಳಿಯ ಪುಟ್ಟಯ್ಯನವರ ಮನೆಯ ಹಿತ್ತಲಿನಲ್ಲಿದ್ದ ನಾಲ್ಕು ಕೋಳಿಗಳು ಮತ್ತು 3 ಆಡುಗಳನ್ನು ಚಿರತೆ ತಿಂದು ಹಾಕಿದೆ. ಬುಧವಾರ ರಾತ್ರಿ ದೇವರಹಳ್ಳಿಯ ಹನುಮಂತೇಗೌಡರಿಗೆ ಸೇರಿದ ಕರುವನ್ನು ಚಿರತೆ ತಿಂದು ಹಾಕಿದ್ದು, ಜಮೀನಿನಲ್ಲಿ ಚಿರತೆಯ ಹೆಜ್ಜೆ ಗುರುತುಗಳು ಕಂಡುಬಂದಿವೆ. ಬೆಲಬಾಳುವ ಮೇಕೆಗಳನ್ನು ಕಳೆದುಕೊಂಡಿರುವ ಮಹದೇವಮ್ಮ ಅರಣ್ಯ ಇಲಾಖೆ ಪರಿಹಾರ ನೀಡಬೇಕೆಂದು ಮನವಿ ಮಾಡಿದ್ದಾರೆ.

ಚಿರತೆ ದಾಳಿ ಹೆಚ್ಚುತ್ತಿದ್ದು, ಅರಣ್ಯ ಇಲಾಖೆ ಅಲ್ಲಲ್ಲಿ ಬೋನಿರಿಸಿ ಚಿರತೆಗಳನ್ನು ಸೆರೆ ಹಿಡಿಯಬೇಕೆಂದು ಸತ್ಯ ಎಂಎಎಸ್ ಫೌಂಡೇಶನ್ ಅಧ್ಯಕ್ಷ ಸತ್ಯಪ್ಪ ಆಗ್ರಹಿಸಿದ್ದಾರೆ. ಅಲ್ಲದೇ ರೈತರ ಪಂಪ್‌ಸೆಟ್‌ಗಳಿಗೆ ರಾತ್ರಿ ವೇಳೆ ವಿದ್ಯುತ್ ಪೂರೈಕೆ ಆಗುತ್ತಿರುವುದರಿಂದ ರೈತರು ಅನಿವಾರ್ಯವಾಗಿ ಜಮೀನುಗಳಿಗೆ ತೆರಳುವ ಪರಿಸ್ಥಿತಿ ಇದ್ದು, ವನ್ಯಮೃಗಗಳ ದಾಳಿಗೆ ಒಳಗಾಗುವ ಸಂಭವವಿದೆ. ಮಳೆಯ ಕೊರತೆಯಿಂದಾಗಿ ರೈತರು ಪಂಪ್‌ಸೆಟ್ ಮೂಲಕ ನೀರು ಹಾಯಿಸುವುದು ಅನಿವಾರ್ಯವಾಗಿದ್ದು, ಸರ್ಕಾರ ಹಗಲು ವೇಳೆ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಕೆ ವ್ಯವಸ್ಥೆ ಕಲ್ಪಿಸಬೇಕೆಂದು ರೈತರು ಆಗ್ರಹಿಸಿದ್ದಾರೆ.

ಕಲಿಕಾ ಸಾಮಗ್ರಿಗಳ ವಿತರಣೆ

● **ಕನ್ನಡಪ್ರಭ ವಾರ್ತೆ** ಹ್ಯಾಂಡ್‌ಪೋಸ್ಟ್

ಕಲಿಕಾ ಸಾಮಗ್ರಿಗಳನ್ನು ಬಳಸಿ ಮಕ್ಕಳ ಕ್ರಿಯಾಶೀಲತೆಯನ್ನು ಹೊರ ತನ್ನಿ ಎಂದು ಶಿಕ್ಷಕ ಸಂತೋಷ್‌ಕುಮಾರ್ ಕರೆ ನೀಡಿದರು.

ಎಚ್.ಡಿ. ಕೋಟೆ ತಾಲೂಕಿನ ಡಿ.ಬಿ. ಕುಪ್ಪೆ ಸರ್ಕಾರಿ ಪ್ರೌಢಶಾಲೆಯಲ್ಲಿ ಗುರುವಾರ ಅಂಗನವಾಡಿ ಕಾರ್ಯಕರ್ತೆಯರಿಗೆ ಕಲಿಕಾ ಸಾಮಗ್ರಿಗಳ ತರಬೇತಿಯ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು .ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಹಾಗೂ ಶಿಶು ಅಭಿವೃದ್ಧಿ ಯೋಜನೆ ಇವರ ಸಂಯುಕ್ತಾಶ್ರಯದಲ್ಲಿ ಒಂದು ದಿನದ ಕಾರ್ಯಾಗಾರ ನಡೆಯಿತು. ಎಸ್‌ವಿವೈಎಂ ಸಂಸ್ಥೆಯು ಎಲ್ಲ 14 ಅಂಗನವಾಡಿ ಕೇಂದ್ರಗಳಿಗೆ ಕಲಿಕಾ ಸಾಮಗ್ರಿಗಳು ಮತ್ತು ಆಟಿಕೆಗಳನ್ನು ನೀಡಿ ಅವುಗಳನ್ನು ಬಳಸಿಕೊಂಡು ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಹೊರ ಹೊಮ್ಮಲು ಚನ್ನಪಟ್ಟಣ ಹಾಗೂ ಮಾಂಟೆಸ್ಸರಿ ಪ್ರಕರಣಗಳು ಉತ್ತಮವಾಗಿವೆ ಎಂದರು.

ಸಂಸ್ಥೆಯ ಸಂಯೋಜಕ ಸೋಮೆಗೌಡ ಮಾತನಾಡಿ, ಉತ್ತಮ ಶಿಕ್ಷಣ ಪ್ರಸ್ತುತ ಸ್ಥಿತಿಯಲ್ಲಿ ಅತ್ಯಶಕವಾಗಿದ್ದು, ಎಲ್ಲ ಮಕ್ಕಳು ಶಿಕ್ಷಣ ಪಡೆಯಬೇಕು. ಯಾವ ಮಗು ಕೂಡ ಶಿಕ್ಷಣದಿಂದ ವಂಚಿತರಾಗಬಾರದು, ಅದಕ್ಕಾಗಿ ಎಸ್‌ವಿವೈಎಂ ಸಂಸ್ಥೆ ಎಲ್ಲ ರೀತಿಯ ಸಹಕಾರ ಸಹಾಯ ಮಾಡಿತ್ತಿದ್ದು, ಎಲ್ಲರೂ ಇದರ ಉಪಯೋಗ ಪಡೆದುಕೊಳ್ಳಬೇಕು ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಇದಕ್ಕೆ ನಮ್ಮ ಜೊತೆ ಕೈ ಜೋಡಿಸಿದರೆ ಎಲ್ಲ ಮಕ್ಕಳಿಗೂ ಶಿಕ್ಷಣ ದೊರೆಯುವಂತೆ ಮಾಡಬಹುದು ಎಂದು ತಿಳಿಸಿದರು.

ಬಳ್ಳೆ ಅಂಗನವಾಡಿ ಕಾರ್ಯಕರ್ತೆ ಶಾರದಾ ಅವರು ಮಕ್ಕಳ ಕಲಿಕೆಗೆ ಎಸ್‌ವಿವೈಎಂ ಕೊಟ್ಟಿರುವ ಕಲಿಕಾ ಸಾಮಗ್ರಿಗಳು ಉಪಯುಕ್ತವಾಗಿವೆ ಎಂದರು. ಎಲ್ಲ ಅಂಗನವಾಡಿ ಕೇಂದ್ರಗಳಿಗೆ ಸಾಮಗ್ರಿಗಳನ್ನು ವಿತರಿಸಲಾಯಿತು. ಬಾಲವಿಕಾಸ ಸಮಿತಿ ಸದಸ್ಯರಾದ ಶಾರದಾ, ಅಂಗನವಾಡಿ ಕಾರ್ಯಕರ್ತೆಯರು, ಎಸ್‌ವಿವೈಎಂ ಸಿಬ್ಬಂದಿ ಎಂ. ಕುಮಾರ್, ದೇವೇಂದ್ರ, ಬಸವರಾಜು, ಮಂಜು, ಮಣಿ ಇದ್ದರು.

ಇಂದು ಹರದೂರಿನಲ್ಲಿ ರಥೋತ್ಸವ

● **ಕನ್ನಡಪ್ರಭ ವಾರ್ತೆ** ಬೆಟ್ಟದಪುರ

ಪಿರಿಯಾಪಟ್ಟಣ ತಾಲೂಕಿನ ಹರದೂರು ಗ್ರಾಮದಲ್ಲಿ ಜೂ. 16ರ ಶುಕ್ರವಾರ ಶ್ರೀ ದೊಡ್ಡಮ್ಮ ತಾಯಿ ರಥೋತ್ಸವ ನಡೆಯಲಿದ್ದು, ಸಕಲ ಸಿದ್ಧತೆಗಳು ಭರದಿಂದ ಸಾಗಿದೆ. ಸುಮಾರು ಎಂಟು ವರ್ಷಗಳ ಬಳಿಕ ಗ್ರಾಮದಲ್ಲಿ ಶ್ರೀ ದೊಡ್ಡಮ್ಮ ತಾಯಿ ಹಬ್ಬವನ್ನು ಎಲ್ಲ ಸಮುದಾಯವರು ಒಟ್ಟಾಗಿ ಸೇರಿ ಆಚರಣೆ ಮಾಡುತ್ತಿದ್ದಾರೆ. ಹಿಂದಿನಿಂದಲೂ ಗ್ರಾಮದ ಕಲ್ಯಾಣ ಮತ್ತು ದುಷ್ಟಶಕ್ತಿಗಳು ಬರದಂತೆ ಆಚರಣೆ ಮಾಡುವುದು ವಾಡಿಕೆಯಾಗಿದೆ.

ಶುಕ್ರವಾರ ಬೆಳಗ್ಗೆ ರಥದ ಮೇಲೆ ಕಳಶ ಪ್ರತಿಷ್ಠಾಪನೆ ನಡೆಯಲಿದೆ. ರಾತ್ರಿ ವೇಳೆ ಗುಡಿಯಲ್ಲಿನ ಶ್ರೀ ದೊಡ್ಡಮ್ಮ ತಾಯಿ ಉತ್ಸವ ಮೂರ್ತಿಯನ್ನು ವಿಶೇಷವಾಗಿ ಅಲಂಕಾರ ಮಾಡಿದ ಪಲ್ಲಕ್ಕಿ ಮೇಲೆ ಕೂರಿಸಿಕೊಂಡು ತೇರಿನ ಸುತ್ತ ಮೂರು ಬಾರಿ ಪ್ರದಕ್ಷಣೆ ಹಾಕಿ, ಬಳಿಕ ಸಲ್ಲುವ ಶುಭಲಗ್ನದಲ್ಲಿ ರಥದ ಮೇಲೆ ದೇವಿಯ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲಾಗುವುದು. ನಂತರ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನದ ಬಳಿಯಿಂದ ಗ್ರಾಮದ ಹೊರಹಲಯದಲ್ಲಿ ಇರುವ ಶ್ರೀ ದೊಡ್ಡಮ್ಮ ಶ್ರೀ ಚಿಕ್ಕಮ್ಮ ತಾಯಿ ದೇವಸ್ಥಾನದವರೆಗೆ ನೂರಾರು ಭಕ್ತರು ತೇರು ಎಳೆಯುವ ಮೂಲಕ ತಾಯಿಗೆ ಜೈಕಾರ ಹಾಕುತ್ತಾರೆ. ಭಕ್ತರು ಕುಟುಂಬದಲ್ಲಿ ಸಮಸ್ಯೆ, ಸಂತಾನ ಭಾಗ್ಯ, ಮದುವೆ ಭಾಗ್ಯ, ಉತ್ತಮ ಆರೋಗ್ಯಕ್ಕಾಗಿ ಸೇರಿದಂತೆ ಇನ್ನಿತರ ಸಮಸ್ಯೆಗಳ ನಿವಾರಣೆ ಆಗಲೆಂದು ತಾಯಿಗೆ ಹರಕೆ ಮಾಡಿಕೊಂಡಿದ್ದನ್ನು ವಿಭಿನ್ನ ರೀತಿಯಲ್ಲಿ ತಮ್ಮ ಹರಕೆ ತಿರಿಸುತ್ತಾರೆ.

ಹಲವಾರು ವರ್ಷಗಳ ಬಳಿಕ ಹಬ್ಬ ನಡೆಯುತ್ತಿರುವುದರಿಂದ ನೂತನ ರಥವನ್ನು ನಿರ್ಮಾಣ ಮಾಡಲಾಗಿದೆ. ಹಬ್ಬದ ಹಿನ್ನೆಲೆ ಗ್ರಾಮದ ಪ್ರಮುಖ ಬೀದಿ ಮತ್ತು ಮುಖ್ಯ ರಸ್ತೆಗಳಲ್ಲಿ ಈಗಾಗಲೇ ಬಣ್ಣಬಣ್ಣದ ವಿದ್ಯುತ್ ದೀಪಾಲಂಕಾರಗಳು ಕಂಗೊಳಿಸುತ್ತಿವೆ.

ಕೆ.ಆರ್. ನಗರ ತಾಲೂಕು ಸರ್ಕಾರಿ ನೌಕರರ ಸಂಘದ ವತಿಯಿಂದ ಶಾಸಕ ಡಿ. ರವಿಶಂಕರ್ ಅವರನ್ನು ಅಭಿನಂದಿಸಲಾಯಿತು. ಸಂಘದ ಅಧ್ಯಕ್ಷ ಸಿ.ಜಿ. ಅರುಣ್ ಕುಮಾರ್, ಕಾರ್ಯದರ್ಶಿ ಕೆ.ಪಿ. ಪ್ರಶಾಂತ್, ಉಮೇಶ್, ಪ್ರಸನ್ನ, ಶಂಕರೇಗೌಡ, ಮಂಜುನಾಥ್ ಇದ್ದಾರೆ.

ನವನಗರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,
ಕೇಂದ್ರ ಕಚೇರಿ: ಕೆ.ಆರ್. ನಗರ, ಶಾಖೆ: ಹೂಟಗಳ್ಳಿ-570 018. ಫೋ-0821-2404312

ನಿಯಮ 13(4) ಪರಿಶಿಷ್ಟ IV
ಕಬ್ಜೆ (ಸ್ವಾಧೀನ) ವಹಿಸುವ ಬಗೆಗಿನ ತಿಳುವಳಿಕೆ ನೋಟೀಸ್

ಸೆಕ್ಯೂರಿಟೈಜೇಶನ್ ಅಂಡ್ ರೀಕನ್‌